**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಡಾ॥ ಎಸ್.ರಂಗಸ್ವಾಮಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹರಿಹರ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:** ಉಪ ನಿಬಂಧಕರು, ವಿಚಾರಣೆಗಳು-1, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ/3056/2012/ ಡಿಆರ್‌ಇ-1, ದಿನಾಂಕ: 22.07.2016

****

**ಪ್ರಸ್ತಾವನೆ:**

ಉಪ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(1)ರ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತ-2 ರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ವಾಸನ ಗ್ರಾಮದ ಸರ್ವೆ ನಂ.76 ರಲ್ಲಿ 06 ಎಕರೆ ಜಮೀನನ್ನು ಆಶ್ರಯ ಯೋಜನೆ ನಿವೇಶನಗಳನ್ನು ಮನೆ ರಹಿತ ಬಡವರಿಗೆ ಹಂಚಿಕೆ ಮಾಡುವ ಉದ್ದೇಶಕ್ಕಾಗಿ, ದಾವಣಗೆರೆ ಉಪವಿಭಾಗಾದ ಸಹಾಯಕ ಆಯುಕ್ತರು, ಮಂಜೂರು ಮಾಡಿದ್ದು, ಆದರೆ, ಸದರಿ ಸರ್ವೆ ನಂಬರನಲ್ಲಿನ 12.11 ಎಕರೆ ಪ್ರದೇಶದ ಪೈಕಿ ಮಂಜೂರಾಗಿದ್ದ 6 ಎಕರೆ ಜೊತೆಗೆ ಹೆಚ್ಚುವರಿಯಾಗಿ 2 ಎಕರೆ ಗೋಮಾಳ ಜಮೀನನ್ನು ಅತಿಕ್ರಮಣ ಮಾಡಿ ನಿವೇಶನಗಳನ್ನು ರಚಿಸಲಾಗಿರುತ್ತದೆಂದು ಹಾಗೂ ಅನರ್ಹ ವ್ಯಕ್ತಿಗಳಿಗೆ ಮತ್ತು ತಮಗೆ ಬೇಕಾದವರಿಗೆ 2 ರಿಂದ 3 ಸೈಟುಗಳನ್ನು ಕಾನೂನುಬಾಹಿರವಾಗಿ ಹಂಚಿಕೆ ಮಾಡಿರುತ್ತಾರೆಂದು ಆರೋಪಿಸಿ, ಈ ಕೆಳಕಂಡ ಅಧಿಕಾರಿ/ನೌಕರರ ಮತ್ತು ಅಧಿಕಾರೇತರರ ವಿರುದ್ಧ ವಾಸನ ಗ್ರಾಮದ ನಿವಾಸಿಯಾದ ಶ್ರೀ ಕೆ.ಮಲ್ಲಪ್ಪ, ಇವರು ನೀಡಿದ್ದ ದೂರಿನನ್ವಯ, ದಿನಾಂಕ: 28.05.2014 ರಂದು ದಾವಣಗೆರೆ ಕ್ಯಾಂಪ್‌ನಲ್ಲಿ ವಿಚಾರಣೆ ನಡೆಸಿದ ನಂತರ, ಈ ಪ್ರಕರಣದಲ್ಲಿ ಸೂಕ್ತ ತನಿಖೆಯನ್ನು ನಡೆಸಿ, ವರದಿಯನ್ನು ನೀಡುವಂತೆ ದಾವಣಗೆರೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ

ಅಧಿಕಾರಿರವರಿಗೆ ಸೂಚಿಸಿದ್ದರ ಮೇರೆಗೆ, ಅವರು ದಿನಾಂಕ: 06.04.2015 ರಂದು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಪ್ರತಿವಾದಿಗಳು 1.33 ಎಕರೆ ಹೆಚ್ಚುವರಿ ಜಮೀನಿನಲ್ಲಿ ನಿವೇಶನಗಳನ್ನು ಮಾಡಲಾಗಿರುತ್ತದೆ ಎಂದು, ಹಾಗೂ 154 ಸೈಟುಗಳು ಅನಧಿಕೃತವಾಗಿದ್ದಲ್ಲಿ, ಇವುಗಳನ್ನು ರದ್ದುಪಡಿಸಲು ಕ್ರಮವಹಿಸಬಹುದಾಗಿರುತ್ತದೆಂದು ತಿಳಿಸಿರುವುದಾಗಿ ವರದಿ ಮಾಡಿರುತ್ತಾರೆ.

1. ಶ್ರೀ ದೇವೇಂದ್ರಪ್ಪ, ಹಿಂದಿನ ಅಧ್ಯಕ್ಷರು, ವಾಸನ ಗ್ರಾಮ ಪಂಚಾಯತಿ.
2. ಶ್ರೀಮತಿ ಚೊಂಡಮ್ಮ, ಹಿಂದಿನ ಉಪಾಧ್ಯಕ್ಷರು, ವಾಸನ ಗ್ರಾಮ ಪಂಚಾಯತಿ,
3. ಶ್ರೀ ಎಂ. ಚಂದ್ರಯ್ಯ, ಹಿಂದಿನ ಕಾರ್ಯದರ್ಶಿ, ವಾಸನ ಗ್ರಾಮ ಪಂಚಾಯತಿ
4. ಡಾ॥ ಎಸ್. ರಂಗಸ್ವಾಮಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹರಿಹರ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ದಾವಣಗೆರೆ ಇವರು ನೀಡಿದ್ದ ವಿಚಾರಣಾ ವರದಿಯ ಮೇರೆಗೆ, ಸರ್ಕಾರಿ ನೌಕರರಾದ ಪ್ರತಿವಾದಿ-3 ಮತ್ತು 4 ಇವರುಗಳಿಗೆ ನೋಟಿಸನ್ನು ಜಾರಿ ಮಾಡಿ ಉತ್ತರಗಳನ್ನು ಪಡೆಯಲಾಗಿದ್ದು, ಸದರಿ ಉತ್ತರಗಳಲ್ಲಿ, ಒಟು-154 ಸೈಟುಗಳ ಪೈಕಿ 52 ಸೈಟುಗಳ ಫಲಾನುಭವಿಗಳು ಅನರ್ಹರಾಗಿರುತ್ತಾರೆಂದು, ಹಾಗೂ 6 ಎಕರೆ ಜಮೀನನ್ನು ಮಾತ್ರ ಆಶ್ರಯ ಯೋಜನೆಗೆ ಮೀಸಲಿರಿಸಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಲ್ಲಿ ವರದಿ ಮಾಡಲಾಗಿರುತ್ತದೆ.

ಪ್ರತಿವಾದಿ 1 ಮತ್ತು 2, ಇವರು ಚುನಾಯಿತ ಪ್ರತಿನಿಧಿಗಳಾಗಿದ್ದು, ಈಗಾಗಲೇ ಇವರ ಅಧಿಕಾರಾವಧಿ ಮುಕ್ತಾಯವಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಸಾಧ್ಯವಿರುವುದಿಲ್ಲವೆಂದು, ವರದಿ ಮಾಡಲಾಗಿರುತ್ತದೆ.

ಪ್ರತಿವಾದಿ 3 ಮತ್ತು 4 ಸರ್ಕಾರಿ ನೌಕರರುಗಳಾಗಿದ್ದು, ದಾವಣಗೆರೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ನೀಡಿರುವ ವರದಿ ಹಾಗೂ ಪ್ರತಿವಾದಿಗಳು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿಗಳು ಆಶ್ರಯ ಯೋಜನೆಗಾಗಿ ಕಾಯ್ದಿರಿಸಿದ್ದ 6 ಎಕರೆ ಜಮೀನಿಗಿಂತ ಹೆಚ್ಚುವರಿ ಜಮೀನುಗಳಲ್ಲಿ ನಿವೇಶನಗಳನ್ನು ಮಾಡಿರುವುದು ಮತ್ತು ಅನರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಹಾಗೂ ಸದರಿ ಅಧಿಕಾರಿ/ನೌಕರರುಗಳು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಾವಳಿಗಳ ನಿಯಮ 1966ರ ನಿಯಮ 3(1)(i) ರಿಂದ (iii) ನಿಯಮಗಳನ್ನು ಉಲ್ಲಂಘಿಸಿ, ಸರ್ಕಾರಿ ನೌಕರರಿಗೆ ತರವಲ್ಲದ

ರೀತಿಯಲ್ಲಿ ನಡೆದುಕೊಂಡು, ಕರ್ತವ್ಯ ನಿಷ್ಠೆ ಕಾಪಾಡಲು ವಿಫಲರಾಗಿರುವುದರಿಂದ, ಇವರುಗಳ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯ್ನನ್ನು ಜರುಗಿಸಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸಿಕೊಡುವಂತೆ ಹಾಗೂ ಸದರಿ ಇಬ್ಬರು ಅಧಿಕಾರಿ/ನೌಕರರುಗಳ ಪೈಕಿ, ಶ್ರೀ ಎಂ.ಚಂದ್ರಯ್ಯ, ಹಿಂದಿನ ಕಾರ್ಯದರ್ಶಿ ವಾಸನ ಗ್ರಾಮ ಪಂಚಾಯತಿ, ಇವರು ಸರ್ಕಾರಿ ಸೇವೆಯಿಂದ ನಿವೃತ್ತರಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು, ಕರ್ನಾಟಕ ನಾಗರೀಕ ಸೇವೆಗಳ ನಿಯಮ 214(2)(ಬಿ)(I) ರನ್ವಯ ಮಂಜೂರಾತಿ ನೀಡುವಂತೆಯೂ ಸಹ, ಮಾನ್ಯ ಉಪಲೋಕಾಯುಕ್ತರು-2, ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಲೋಕಾಯುಕ್ತರ ವರದಿ ಹಾಗೂ ಅದರೊಂದಿಗಿನ ಅಡಕಗಳ ಪರಿಶೀಲನೆಯಿಂದ ಆಪಾದಿತ ಸರ್ಕಾರಿ ನೌಕರರುಗಳು ದುರ್ನಡತೆ ದುರ್ವರ್ತನೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ವಾಸನ ಗ್ರಾಮ ಪಂಚಾಯತಿಯ ಹಿಂದಿನ ಕಾರ್ಯದರ್ಶಿಯಾಗಿದ್ದ ಶ್ರೀ ಚಂದ್ರಯ್ಯ, ಇವರು ದಿನಾಂಕ: 31.05.2015 ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು, ವಾಸನ ಗ್ರಾಮದ ಸರ್ವೆ ನಂ. 76 ರಲ್ಲಿ ರಚಿಸಿದ್ದ ಒಟ್ಟು-154 ಸೈಟುಗಳ ಹಂಚಿಕೆಯಲ್ಲಿ, ಹಾಗೂ ಸದರಿ ಸರ್ವೆ ನಂ.ನಲ್ಲಿ ಒಟ್ಟು 1.33 ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡು ರಚಿಸಿರುವ ಸೈಟುಗಳ ಹಂಚಿಕೆಗೆ ಸಂಬಂಧಿಸಿದ ಘಟನೆಯು 1998 ರಲ್ಲಿ ಮತ್ತು 2003 ರಲ್ಲಿ ನಡೆದಿದ್ದು, ಈ ಘಟನೆಯು ನಡೆದು ಸುಮಾರು 13 ವರ್ಷಗಳಿಗೂ ಮೇಲ್ಪಟ್ಟಾಗಿರುತ್ತದೆ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(ii) ರನ್ವಯ, ನಿವೃತ್ತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಹೂಡುವ ದಿನಾಂಕದಿಂದ ಹಿಂದಿನ 4 ವರ್ಷಗಳೊಳಗಾಗಿ ನಡೆದ ಘಟನೆಗೆ ಸಂಬಂಧಿಸಿದಂತೆ ಮಾತ್ರ ಇಲಾಖಾ ವಿಚಾರಣೆಯನ್ನು ಹೂಡಲು ಅವಕಾಶವಿರುತ್ತದೆ. ಈ ಪ್ರಕರಣದಲ್ಲಿ ಘಟನೆಯು ನಡೆದು ಸುಮಾರು 13 ವರ್ಷಗಳು ಗತಿಸಿರುವುದರಿಂದ, ನಿವೃತ್ತ ನೌಕರರಾದ ಶ್ರೀ ಎಂ.ಚಂದ್ರಯ್ಯ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ಅನ್ವಯವಾಗುವುದಿಲ್ಲ. ಈ ಸಂಬಂಧ ಪ್ರತ್ಯೇಕವಾಗಿ ಪರಿಶೀಲಿಸಲಾಗುವುದು.

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾನ್ಯ ಉಪಲೋಕಾಯುಕ್ತರು-2 ಇವರು ಮಾಡಿರುವ ಶಿಫಾರಸ್ಸಿನಂತೆ, ಹರಿಹರ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಡಾ॥

ಎಸ್.ರಂಗಸ್ವಾಮಿ, (ಪ್ರಸ್ತುತ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ದಾವಣಗೆರೆ) ಇವರುಗಳ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ, ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 148 ಪಬವ 2015 ಬೆಂಗಳೂರು ದಿನಾಂಕ:31-08-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಹರಿಹರ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಲ್ಲಿ ಈ. ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಡಾ॥ ಎಸ್.ರಂಗಸ್ವಾಮಿ, (ಪ್ರಸ್ತುತ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ದಾವಣಗೆರೆ) ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ಪ್ರಕಾರ ಮಾನ್ಯ ಉಪಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

31/8/2016

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಜಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-2 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಉಪ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ
5) ಸಂಬಂಧಿಸಿದ ಅಧಿಕಾರಿಗಳಿಗೆ.(ಮು.ಕಾ.ನಿ.ಅ.ಜಿಪಂ: ದಾವಣಗೆರೆ. ಇವರ ಮುಖಾಂತರ)

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.